| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 110/2020

ಪ್ರಾ.ಸಾ. 4 ಚಾ.ಸಾ. 2

| | | |
|---|---|---|
| ಹೆಸರು | : | ಗುರು |
| ತಂದೆಯ ಹೆಸರು | : | ಸಂಗಪ್ಪ ಅಪ್ಪಾಗೊಳ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಮುಖ್ಯೋಪಾದ್ಯಾಯರು |
| ವಾಸ | : | ವಜ್ಜಲ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 09-06-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 2008 ರಿಂದ 2023ರ ವರೆಗೆ ಸರಕಾರಿ ಪ್ರೌಢ ಶಾಲೆ ಮುದ್ನೂರದಲ್ಲಿ ಸಹ-ಶಿಕ್ಷಕರಾಗಿ ಕರ್ತವ್ಯ ನಿರ್ವಸಿರುತ್ತೇನೆ.

2. ನನಗೆ ಚಾಸಾ-1, 3 ರಿಂದ 15 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ದಿ: 24.09.2020 ರಂದು ನನ್ನನ್ನು ಮತ್ತು ಚಾಸಾ-3 ಅಬ್ದುಲ ಖಯುಮ ಸಹ-ಶಿಕ್ಷಕರು ಅವರನ್ನು ಕೆಂಭಾವಿ ಪೊಲೀಸಠಾಣೆಗೆ ಕರೆಯಿಸಿದ್ದರು. ನಮ್ಮ ಮುಖ್ಯೋಪಾದ್ಯಯರು ನಮಗೆ ದೂರವಾಣಿ ಕರೆ ಮಾಡಿ ಠಾಣೆಗೆ ಹೋಗುವಂತೆ ಸೂಚಿಸಿರುತ್ತಾರೆ. ನಾವು ಅದೇ ದಿನ ಬೆಳಿಗ್ಗೆ 10-30 ಪೊಲೀಸಠಾಣೆಗೆ ಹೋದೆವು. ಅಗ್ನಿ ಗ್ರಾಮದ ಸೀಮಾಂತರದ ಸರ್ವೆ ನಂ. 176 ರಲ್ಲಿ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ದಾಳಿ ಮಾಡಲು ಹೋಗಬೇಕು ನೀವು ಪಂಚರಾಗಿ ಸಹಕರಿಸಿ ಎಂದು ಹೇಳಿದರು. ಆ ಪ್ರಕಾರ ನಾವು ಒಪ್ಪಿಕೊಂಡೆವು. ನಾವು ಬೆಳಿಗ್ಗೆ 11-30 ಗಂಟೆಗೆ ಪೊಲೀಸಠಾಣೆಗೆ ಬಿಟ್ಟೆವು ಘಟನಾ ಸ್ಥಳಕ್ಕೆ 12-30 ಗಂಟೆಗೆ ತಲುಪಿದೆವು. ನಾವು ಅಲ್ಲಿ ಜೀಪುಗಳನ್ನು ನಿಲ್ಲಿಸಿ ಕಾಲು ನಡುಗೆಯಲಿ ಸುಮಾರು 1 ಕಿ.ಮೀ. ವರೆಗೆ ಹೋದೆವು. ನಾವು ಹೋದ ಸರಕಾರಿ ವಾಹನದ ನೊಂದಣಿ ಸಂಖ್ಯೆ: ಕೆಎ-33 ಜಿ-0074 ಆಗಿತ್ತು. ನಾವು ಹೋಗುವಾಗ ನಮ್ಮನ್ನು ನೋಡಿ ಅಲ್ಲಿ ನಿಂತ್ತಿದ್ದ ಒಬ್ಬರು ಓಡಿ ಹೋದರು. ನಮ್ಮ ಜೊತೆ ಪೊಲೀಸ ಸಿಬ್ಬಂದಿ ಸಹ ಇದ್ದರು. ನಾವು ಅಲ್ಲಿ ಹೋಗಿ ನಿಂತುಕೊಂಡೆವು ನಮ್ಮ ಮುಂದೆ 2

ಫೀಟನ 70 ಗಾಂಜಾ ಗಿಡಗಳನ್ನು ಮತ್ತು 3 ವರೆ ಫೀಟನ 20 ಗಾಂಜಾ ಗಿಡಗಳನ್ನು ಕಿತ್ತಿ ಅವುಗಳಲ್ಲಿ ನಾಲ್ಕು ನಾಲ್ಕು ಪೆಂಡಿ ಮಾಡಿ ಅದರ ಮೇಲೆ ಚೀಟಿ ಅಂಟಿಸಿ ನಮ್ಮ ಸಹಿ ಪಡೆದರು. ಅದನ್ನು ತೂಕ ಮಾಡಿದಾಗ ಒಟ್ಟು 22 ಕೆ.ಜಿ 400 ಗ್ರಾಮ ಗಾಂಜಾ ಇತ್ತು. ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30 ಗಂಟೆಯವರೆಗೆ ಮಾಡಿದರು. ನಿ.ಪಿ.1ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1(ಸಿ) ಎಂದು ಗುರುತಿಸಲಾಯಿತು. ನಿ.ಪಿ.3 ರಿಂದ 6 ಭಾವಚಿತ್ರಗಳಲ್ಲಿ ಸಾಕ್ಷಿ ತಮ್ಮ ಭಾವಚಿತ್ರ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾ.1ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮು.ಮಾ.1ನ್ನು ನನ್ನ ಸಮಕ್ಷಮ ಪ್ಯಾಕ ಮಾಡಿ ಮುದ್ರಿಸಿ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಕೆ.ಟಿ. ವಕೀಲರಿಂದ

3. ನನಗೆ ಪಿಎಸಐ ಅವರು ಪಂಚನಾಮೆಗೆ ಕರೆದಿರುತ್ತಾರೆ. ಪಂಚನಾಮೆಯಲ್ಲಿ ನಮ್ಮ ಮುಖ್ಯೋಪಾಧ್ಯಯರು ಸೂಚಿಸಿದ ಬಗ್ಗೆ ನಮೂದಿಸಿರುತ್ತಾರೆ. ನಾನು ಶಾಲೆಯಿಂದ ಹೊರಗೆ ಹೋಗಲು ಕರ್ತವ್ಯದ ಸಮಯದಲ್ಲಿ ಮುಖ್ಯೋಪಾಧ್ಯಯರ ಅನುಮತಿ ಬೇಕು ಅಂದರೆ ಸರಿ. ನಾನು ಲಿಖಿತವಾಗಿ ಮುಖ್ಯೋಪಾಧ್ಯಯರ ಅನುಮತಿ ಪಡೆದಿರಲಿಲ್ಲ ಎಂದರೆ ಸರಿ. ಆರೋಪಿತರು ಕಾಣುವಷ್ಟು ದೂರದಿಂದ ನಮ್ಮನ್ನು ನೋಡಿ ಪಶ್ಚಿಮ ದಿಕ್ಕಿಗೆ ಓಡಿ ಹೋಗಿರುತ್ತಾರೆ.

4. ನನಗೆ ಗಾಂಜಾ ಗಿಡಗಳನ್ನು ಗುರುತಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆ ವಿಷಯವಾಗಿ ಸಸ್ಯ ಶಾಸ್ತ್ರದಲ್ಲಿ ಯಾವುದೇ ವಿದ್ಯಾಭ್ಯಾಸ ಆಗಿಲ್ಲ ಎಂದರೆ ಸರಿ. ಆರೋಪಿತರ ಹೊಲದಲ್ಲಿ ಹತ್ತಿ ಗಿಡ ಮತ್ತು ಗಾಂಜಾ ಗಿಡಗಳು ಸಮಾನವಾಗಿ ಬೆಳೆದಿದ್ದವು. ಸದರಿ ಹೊಲದ ಪಹಣಿ ನನಗೆ ಪೊಲೀಸರು ತೋರಿಸಿರುವುದಿಲ್ಲ. ಸದರಿ ಹೊಲ ಎಷ್ಟು ವಿಸ್ತೀರ್ಣವಾಗಿದೆ ಎಂದು ನನಗೆ ಗೊತ್ತಿಲ್ಲ. ಭಾವಚಿತ್ರದಲ್ಲಿರುವ ಎಲ್ಲರ ಹೆಸರು ಹೇಳಲು ನನಗೆ ಬರುವುದಿಲ್ಲ. ಸದರಿ ಹೊಲದ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದಾಗ ಅಕ್ಕ ಪಕ್ಕದ ಜಮೀನಿನ ಜನರು ಬಂದಿರಲಿಲ್ಲ. ಆರೋಪಿತರ ಹೆಸರು ಮತ್ತು ಗುರುತನ್ನು ಪೊಲೀಸರೆ ನನಗೆ ತಿಳಿಸಿರುತ್ತಾರೆ. ಆರೋಪಿ ಸ್ಥಳದಿಂದ ತಪ್ಪಿಸಿಕೊಂಡು ಹೋಗುವ ಸಮಯದಲ್ಲಿ ಪೊಲೀಸರು ಹಿಡಿಯಲು ಯತ್ನಿಸಲಿಲ್ಲ. ಸದರಿ ಹೊಲ ನೀರಾವರಿ ಅಥವಾ ಖುಷ್ಕಿ ಯಾವುದು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಯನ್ನು ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಪೊಲೀಸರು ಠಾಣೆಯಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಗಾಂಜಾ ಗಿಡಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮುಖ್ಯೋಪಾಧ್ಯಯರ ಸೂಚನೆಯಂತೆ ಪಂಚನಾಮೆಗೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊಲದಿಂದ ಓಡಿ ಹೋದ ವ್ಯಕ್ತಿ ಆರೋಪಿಯೇ ಇರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಿಃ 24.09.2020 ರಂದು ನನ್ನನ್ನು ಮತ್ತು ಚಾಸಾ-3 ಅಬ್ದುಲ ಖಯುಮ ಸಹ-ಶಿಕ್ಷಕರು ಅವರನ್ನು ಕೆಂಭಾವಿ ಪೊಲೀಸಠಾಣೆಗೆ ಕರೆಯಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೀರಪ್ಪ ಪೇದೆ ಬಂದು ಬೆಳಿಗ್ಗೆ 10-00 ಗಂಟೆಗೆ ಬರುವಂತೆ ಹೇಳಿ ನಮ್ಮನ್ನು ಕರೆದುಕೊಂಡು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಗ್ನಿ ಸೀಮಾಂತರದ ಸರ್ವೆ ನಂ. 176 ರಲ್ಲಿ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ದಾಳಿ ಮಾಡಲು ಹೋಗಬೇಕು ನೀವು ಪಂಚರಾಗಿ ಸಹಕರಿಸಿ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ನಾವು ಒಪ್ಪಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಬೆಳಿಗ್ಗೆ 11-30 ಗಂಟೆಗೆ ಪೊಲೀಸಠಾಣೆಗೆ ಬಿಟ್ಟೆವು ಘಟಾ ಸ್ಥಳಕ್ಕೆ 12-30 ಗಂಟೆಗೆ ತಲುಪಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅಲ್ಲಿ ಹೋಗಿ ನಿಂತುಕೊಂಡೆವು ನಮ್ಮ ಮುಂದೆ 2 ಫೀಟನ 70 ಗಾಂಜಾ ಗಿಡಗಳನ್ನು ಮತ್ತು 3 ವರೆ ಫೀಟನ 20 ಗಾಂಜಾ ಗಿಡಗಳನ್ನು ಕಿತ್ತಿ ಅವುಗಳಲ್ಲಿ ನಾಲ್ಕು ನಾಲ್ಕು ಪೆಂಡಿ ಮಾಡಿ ಅದರ ಮೇಲೆ ಚೀಟಿ ಅಂಟಿಸಿ ನಮ್ಮ ಸಹಿ ಪಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ತೂಕ ಮಾಡಿದಾಗ ಒಟ್ಟು 22 ಕೆ.ಜಿ 400 ಗ್ರಾಮ ಗಾಂಜಾ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30 ಗಂಟೆಯವರೆಗೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.